**ಓ ಎಸ್ ನಂಃ41/2018**

**ಡಿ. ಡಬ್ಲ್ಯೂ ಃ 1**

**ದಿಃ 14.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಹೆಚ್ಚುವರಿ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಕೆ ಜಿ ಎಸ್ ವಕೀಲರಿಂದ**

**ನನ್ನ ಹೆಚ್ಚುವರಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

**ಪಾಟಿ ಸವಾಲು ಃ ವಾದಿ ಪರ ಶ್ರೀ ಬಿ ಜಿ ವಕೀಲರಿಂದ ಃ**

ನಾನು 10 ನೆ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಪೊಲೀಸ್ ಪೇದೆಯಾಗಿರುತ್ತೇನೆ. ನಾನು ಈಗ ನಿವೃತ್ತನಾಗಿರುತ್ತೇನೆ. ನನ್ನ ಮಗ ದೀಪಕ್ ಸಾಫ್ಟವೇರ್ ಇಂಜೀಯರ್ ಇರುತ್ತಾರೆ ಎಂದರೆ ಸರಿ. ಮಾದಿಗೊಂಡನಹಳ್ಳಿಯಲ್ಲಿ ಇರುವ ಜಮೀನು 9 ಎಕರೆ 39 ಗುಂಟೆ ಇತ್ತು ಎಂದರೆ ಸರಿ. ಅದು ನಮ್ಮ ತಾತನ ಪಿತ್ರಾರ್ಜಿತ ಸ್ವತ್ತು ಇತ್ತು ಎಂದು ಸಾಕ್ಷಿ ಹೇಳುತ್ತಾರೆ. ಅದರಲ್ಲಿ ಮತ್ತು ಇತರೆ ನಮ್ಮ ಕುಟುಂಬದ ಸ್ವತ್ತುಗಳಲ್ಲಿ ಭಾಗ ಕೇಳಿ ಓ ಎಸ್ 100/1989 ಎನ್ನುವ ದಾವೆ ಮಾಡಿದ್ದೇನು ಎಂದರೆ ಸರಿ. 2003 ರಲ್ಲಿ ಆ ಪ್ರಕರಣ ರಾಜಿಯಾಗಿತ್ತು ಎಂದರೆ ಸರಿ. ಅದರಲ್ಲಿ ಸಿ ಷೆಡ್ಯೂಲ್ ಸ್ವತ್ತಿನಲ್ಲಿ 2 ಎಕರೆ 39 ಗುಂಟೆ ನನ್ನ ಭಾಗಕ್ಕೆ ಬಂದಿತ್ತು ಎಂದರೆ ಸರಿ. ರಾಜಿ ಡಿಕ್ರಿಯ ಪ್ರತಿ ನನ್ನ ಬಳಿ ಇದೆ. ಅದನ್ನು ಇನ್ನೊಂದು ಪ್ರಕರಣದಲ್ಲಿ ಹಾಜರುಪಡಿಸಿದ್ದೇನೆ.

ನನಗೆ ಬಂದ 2 ಎಕರೆ 39 ಗುಂಟೆ ಸ್ವತ್ತು ಬೇರೆ ಬೇರೆ ಪೀಸ್ ಗಳಲ್ಲಿ ಬೇರೆ ಚೆಕ್ ಬಂದಿಯ ಮದ್ಯೆದಲ್ಲಿ ಬಂದಿತ್ತು ಎಂದರೆ ಸರಿ. ರಾಜಿ ಆಗಬೇಕಾದರೆ ನಾವು 11 ಇ ಸ್ಕೆಚ್ ನ್ನು ಮಾಡಿಸಿರಲಿಲ್ಲ ಎಂದರೆ ಸರಿ. ಎಲ್ಲ ಪೋಡುಗಳನ್ನು ಸರ್ವೆ ಮಾಡಿದ್ದರು, ಆದರೆ ಆರ್ ಟಿ ಸಿ ಒಂದೇ ಬಂದಿತ್ತು ಎಂದು ಸಾಕ್ಷಿ ಹೇಳುತ್ತಾರೆ. ನಾನು ತುಂಡು ತುಂಡು ಜಮೀನುಗಳಲ್ಲಿ ಸ್ವಾಧೀನದಲ್ಲಿದ್ದೇನೆ ಎಂದರೆ ಸರಿ. ಖಾತೆಯಾಗುವ ಸಂದರ್ಭದಲ್ಲಿಯೂ 11 ಇ ಸ್ಕೆಚ್ ಮಾಡಿರಲಿಲ್ಲ ಎಂದರೆ ಸರಿ. ಸ.ನಂ. 38 ಪೋಡಿಯಾದ ನಂತರ 2 ಎಕರೆ 37 ಗುಂಟೆ ಆಗಿದ್ದು ನನಗೆ ಗೊತ್ತಿಲ್ಲ.

ರಾಷ್ಟ್ರೀಯ ಹೆದ್ದಾರಿಗಾಗಿ ನನ್ನ ಸ್ವತ್ತಿನಲ್ಲಿ ಜಮೀನು ಸ್ವಾಧೀನ ಮಾಡಿಕೊಂಡಿದ್ದರು, ಆದರೆ ಎಷ್ಟು ಸ್ವಾಧೀನ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಅದರಲ್ಲಿ 3 ಜನರ ಸ್ವತ್ತುಗಳು ಬರುತ್ತವೆ ಎಂದು ಸಾಕ್ಷಿ ಹೇಳುತ್ತಾರೆ. ಪೋಡಿಯಾಗಿರುವುದನ್ನು ಪ್ರಶ್ನಿಸಿ ನಾನು ಮೇಲ್ಮನವಿ ಪ್ರಾಧಿಕಾರಕ್ಕೆ ಅಪೀಲು ಮಾಡಿಲ್ಲ.

ರಾಜಿ ಆದ ಪ್ರಕರಣದಲ್ಲಿ ಸಿ ಷೆಡ್ಯೂಲ್ ನಲ್ಲಿ ತೋರಿಸಿರುವ 5 ನೆ ಸ್ವತ್ತು 30 ಗುಂಟೆ ನನಗೆ ಕೊಟ್ಟ 2 ಎಕರೆ 39 ಗುಂಟೆಯಲ್ಲಿ ಬರುತ್ತದೆ ಎಂದರೆ ಸರಿ. ಸದರಿ 30 ಗುಂಟೆಯಲ್ಲಿ ರಸ್ತೆಗಾಗಿ ಜಮೀನು ಹೋಗಿದೆ ಆದರೆ ಎಷ್ಟು ಗುಂಟೆ ಎಂದು ಗೊತ್ತಿಲ್ಲ. ನಾನು ಮತ್ತು ವಾದಿಯು 27 ಗುಂಟೆ ಮಾರಾಟ ಮಾಡಲು ಮತ್ತು ಕ್ರಯ ಮಾಡಲು ಒಪ್ಪಿಕೊಂಡಿದ್ದೇವು ಎಂದರ ಸರಿಯಲ್ಲ. 30 ಗುಂಟೆಯನ್ನು ನಾನು ಕ್ರಯಕ್ಕೆ ಕೊಡುತ್ತೇನೆಂದು ಹೇಳಿದ್ದೇನು ಎಂದು ಸಾಕ್ಷಿ ಹೇಳುತ್ತಾರೆ.

ರಸ್ತೆಗಾಗಿ ಹೋದ 3 ಗುಂಟೆಯನ್ನು ಹೊರತುಪಡಿಸಿ ಉಳಿದ 27 ಗುಂಟೆಯನ್ನು ನಾನು ಕ್ರಯ ಮಾಡುತ್ತಿದ್ದೇನೆಂದು ಕ್ರಯಪತ್ರ ಬರೆದುಕೊಟ್ಟಿದ್ದೇನೆಂದರೆ ಸರಿಯಲ್ಲ. ಕ್ರಯದ ಮೊಬಲಗನ್ನು ರೂ. 64,80,000 ಗಳಿಗೆ ನಿಗದಿ ಮಾಡಿದ್ದೇವು ಎಂದರೆ ಸರಿ. ನಾನು ಕ್ರಯದ ಮಾತುಕತೆ ಮಾಡಿದ್ದು ವೆಂಕಟಾಚಲಯ್ಯ ಎಂಬುವವರ ಜೊತೆಗೆ ಹಾಗಾಗಿ ನಾನು ವಾದಿಗೆ ದಿನಾಂಕ : 16.03.2016 ರಂದು ಯಾವುದೆ ಕ್ರಯಪತ್ರ ಬರೆದುಕೊಟ್ಟಿಲ್ಲ. ಮಾತುಕತೆ ಸಮಯದಲ್ಲಿ ವೆಂಕಟಾಚಲಯ್ಯ ಅವರ ಮಗ ಹನುಮಂತನಿಗಾಗಿ ಕ್ರಯಕ್ಕೆ ತೆಗೆದುಕೊಳ್ಳುತ್ತಿದ್ದೇನೆ ಎಂದು ಹೇಳಿದ್ದರು. ಅಲ್ಲಿ ವಾದಿಯ ವಿಷಯ ಪ್ರಸ್ತಾಪ ಆಗಿಲ್ಲ ಎಂದು ಸಾಕ್ಷಿ ಹೇಳುತ್ತಾರೆ . ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ವಾದಿಯನ್ನು ನೋಡಿಯೇ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಮಾತುಕತೆ ಆದ ದಿನ ಕರಾರುಪತ್ರ ಆಗಿಲ್ಲ. ಬೇರೆ ದಿನ ಆಗಿದೆ. ಕ್ರಯದ ಕರಾರುಪತ್ರದಲ್ಲಿ ರಮೇಶ್ ಎಂಬುವವರ ಹೆಸರಿತ್ತು ಆದರೆ ರಮೇಶ್ ಎಂಬುವವರ ಜೊತೆ ಯಾವುದೆ ವ್ಯವಹಾರ ಮಾಡಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.

ಕರಾರುಪತ್ರ ಆದ ದಿನ ರೂ. 5 ಲಕ್ಷ ನಗದು ಮತ್ತು 5 ಲಕ್ಷಗಳನ್ನು ಡಿಡಿ ಮೂಲಕ ಪಡೆದಿದ್ದೇನೆ ಎಂದರೆ ಸರಿ. ಹಣ ಮತ್ತು ಡಿಡಿ ಯನ್ನು ವಾದಿ ನನಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ, ವೆಂಕಟಾಚಲಯ್ಯ ಕೊಟ್ಟಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಈ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಉಳಿಕೆ ಹಣವನ್ನು ಕ್ರಯಪತ್ರ ಬರೆದುಕೊಡುವ ಕಾಲಕ್ಕೆ ಕೊಡುತ್ತೇನೆಂದು ಒಪ್ಪಿಕೊಂಡಿದ್ದೆನೆಂದರೆ ಸರಿಯಲ್ಲ.

ಕರಾರುಪತ್ರದಲ್ಲಿ ಇರುವ ಸಹಿಗಳನ್ನು ನಾನು ಮತ್ತು ನನ್ನ ಮಗ ಮಾಡಿದ್ದೇವೆಂದರೆ ಸರಿ. ಅವುಗಳನ್ನು ವೆಂಕಟಾಚಲಯ್ಯ ಇವರ ಮುಂದೆ ಮಾಡಿದ್ದೇವೆಂದು ಸಾಕ್ಷಿ ಹೇಳುತ್ತಾರೆ. ನಾನು ಕರಾರುಪತ್ರದಲ್ಲಿ ಬರೆದಿದ್ದನ್ನು ಓದಲಿಲ್ಲ. ಏಕೆಂದರೆ ವೆಂಕಟಾಚಲಯ್ಯ ನನ್ನ ಸಹಪಾಠಿ ಮತ್ತು ಸ್ನೇಹಿತನಾಗಿದ್ದನು ಹಾಗಾಗಿ ವಿಶ್ವಾಸದಿಂದ ಸಹಿ ಮಾಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ನಾನು ಎಲ್ಲ ದಾಖಲೆಗಳನ್ನು ಓದಿಯೇ ಸಹಿ ಮಾಡಬೇಕಾಗುತ್ತದೆ ಎಂದರೆ ಸರಿ. ಕರಾರುಪತ್ರದಲ್ಲಿ ಪೋಡಿ ಮಾಡಿದ ನಂತರ ಎಷ್ಟು ಜಮೀನು ಬರುತ್ತದೆಯೇ ಅಷ್ಟಕ್ಕೆ ಕ್ರಯದ ಮೊತ್ತವನ್ನು ನಿಗದಿ ಮಾಡಬೇಕು ಎಂದು ಬರೆದಿತ್ತು ಎಂದರೆ ಸರಿಯಲ್ಲ.

ಕರಾರುಪತ್ರದಲ್ಲಿ ವಿಸ್ತೀರ್ಣ ಹೆಚ್ಚಾದರೆ ಅಥವಾ ಕಡಿಮೆಯಾದರೆ ಹಣ ಹೆಚ್ಚು ಅಥವಾ ಕಡಿಮೆ ಮಾಡಬೇಕೆಂದು ಬರೆದಿದೆಯೇ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಕ್ರಯದ ಮಾತುತಕೆ ಆದ ಸಮಯದಲ್ಲಿ ಪಹಣಿ ಪ್ರಕಾರ ಮತ್ತು ಕೋರ್ಟ್ ಡಿಕ್ರಿ ಪ್ರಕಾರ ಮಾತುಕತೆ ಆಗಿತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ಜಮೀನು ಪೋಡಿಯಾಗಿರಲಿಲ್ಲ ಎಂದರೆ ಸರಿ. ಕರಾರುಪತ್ರ ಬರೆದುಕೊಡುವ ಸಮಯದಲ್ಲಿ ಪೋಡಿ ಮಾಡಿಸಿ ದಾಖಲೆಗಳನ್ನು ಸರಿಪಡಿಸಿಕೊಂಡು ಮೂಲ ದಾಖಲಾತಿಗಳನ್ನು ಕೊಟ್ಟು ಕ್ರಯಪತ್ರ ಬರೆದುಕೊಟ್ಟಿದ್ದೇನೆಂದು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕರಾರುಪತ್ರದಲ್ಲಿ ಆ ವಿಷಯವನ್ನು ಬರೆದಿರಬಹುದು, ಆದರೆ ವೆಂಕಟಾಚಲಯ್ಯ ಪೋಡಿ ನಾನೇ ಮಾಡಿಸುತ್ತೇನೆಂದು ಹೇಳಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ಅಕ್ಕ ಪಕ್ಕದ ಜಮೀನುನವರು ಯಾರಾದರೂ ವಿವಾದ ಮಾಡಿದರೆ ಅದನ್ನು ಬಗೆಹರಿಸಕೊಡುತ್ತೇನೆಂದು ಹೇಳಿದ್ದೇನು ಎಂದರೆ ಸರಿಯಲ್ಲ.

ನನ್ನ ಮಗನಿಗೆ ಇಂಗ್ಲೀಷ್ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ಕರಾರುಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳು ನನಗೆ ಮತ್ತು ನನ್ನ ಮಗನಿಗೆ ಗೊತ್ತು ಎಂದರೆ ಸರಿಯಲ್ಲ. ಕರಾರುಪತ್ರದ ಎಲ್ಲ ವಿಷಯಗಳನ್ನು ಓದಿಸಿ ತಿಳಿದುಕೊಂಡು ನಂತರ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಎಲ್ಲ ವಿಷಯ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯಪತ್ರ ನೊಂದಣಿಯಾಗಬೇಕಾದರೆ 11 ಇ ಸ್ಕೆಚ್ ಬೇಕಾಗಿತ್ತು ಎಂದರೆ ಸರಿ. ಈ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಕರಾರುಪತ್ರ ಆದ 3 ತಿಂಗಳಲ್ಲಿ ಪೋಡಿ ಮಾಡಿಸಿ ಬಾಕಿ ಹಣ ಪಡೆದು ಕ್ರಯಪತ್ರ ಮಾಡಿಸಿಕೊಡುತ್ತೇನೆಂದು ಹೇಳಿ, ನಾನು ಆ ಪ್ರಕಾರ ನೆಡದುಕೊಳ್ಳಲಿಲ್ಲ ಎಂದರೆ ಸರಿಯಲ್ಲ. ನಾನು ಪೋಡಿ ಮಾಡಲು ಅರ್ಜಿ ಕೊಟ್ಟಿಲ್ಲ.

ದಿನಾಂಕ : 19.01.2017 ರಂದು ವಾದಿಗೆ ನಾನು ಲೀಗಲ್ ನೋಟೀಸ್ ಕೊಟ್ಟಿದ್ದೇನೆಂದರೆ ಸರಿ. ಆ ಸಂದರ್ಭದಲ್ಲಿ ಜಮೀನು ಪೋಡಿಯಾಗಿರಲಿಲ್ಲ. ನಾನು ನೋಟೀಸ್ ನ್ನು ರಮೇಶ್‌ನಿಗೆ ಕೊಟ್ಟಿದ್ದೇನೆ. ವೆಂಕಟಾಚಲಯ್ಯ ಇವರಿಗೆ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಲೀಗಲ್ ನೋಟೀಸ್ ಕೊಟಟ್ಟಿದ್ದೇನೆಂದರೆ ಸರಿಯಲ್ಲ. ಕರಾರುಪತ್ರ ಬರೆದುಕೊಡುವ ಕಾಲಕ್ಕೆ ಪೋಡಿ ಮಾಡಿಸಿಕೊಡುತ್ತೇನೆಂದು ಒಪ್ಪಿಕೊಂಡು ವಾದಿಯೇ ಮಾಡಿಸಿಕೊಳ್ಳಲಿ ಎಂದು ನಾನು ಸುಮ್ಮನಿದ್ದೇನು ಎಂದರೆ ಸರಿಯಲ್ಲ. ವಾದಿಯು ನಾನು ಕೊಟ್ಟ ನೋಟೀಸ್ ಗೆ ಉತ್ತರ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ವೆಂಕಟಾಚಲಯ್ಯ ಮತ್ತು ರಮೇಶ್ ಇಬ್ಬರನ್ನು ಕರೆಯಿಸಿದ್ದೇನು ಎಂದರೆ ಸರಿಯಲ್ಲ. ವೆಂಕಟಾಚಲಯ್ಯ ಸಹ ನನ್ನನ್ನು ಭೇಟಿಯಾಗಲು ಬಂದಿಲ್ಲ. ಅವರಿಬ್ಬರು ಬಂದು ನನ್ನನ್ನು ಭೇಟಿಯಾದಾಗ ನಾನು ಅವರಿಗೆ ನಾನು ಓಡಾಡಲು ಆಗುವುದಿಲ್ಲ. ನೀವೇ ಪೋಡಿ ಮಾಡಿಸಿಕೊಳ್ಳಿ ಖರ್ಚು ವೆಚ್ಚವನ್ನು ನಾನೇ

ಕೊಡುತ್ತೇನೆಂದು ಹೇಳಿದ್ದೇನುಎಂದರೆ ಸರಿಯಲ್ಲ. ನಂತರ ವಾದಿಯು ಕಚೇರಿಗಳಿಗೆ ಓಡಾಡಿ ಪೋಡಿ ಮಾಡಿಸಿದ್ದರು ಎಂದರೆ ಸರಿಯಲ್ಲ. ಅರ್ಜಿಗಳಿಗೆ ನಾನೇ ಸಹಿ ಮಾಡಿಕೊಟ್ಟಿದ್ದೇನೆಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಸ.ನಂ. 38/ 1 ರಲ್ಲಿ 1 ಎಕರ 19 ಗುಂಟೆ ಸ.ನಂ. 38/4 ರಲ್ಲಿ 21 ಗುಂಟೆ , ಸ.ನಂ. 38/5 ರಲ್ಲಿ 14 ಗುಂಟೆ, ಸ.ನಂ. 38/9 ರಲ್ಲಿ 3 ಗುಂಟೆ , ಸ.ನಂ. 38/12 ರಲ್ಲಿ 20 ಗುಂಟೆ ಎಂದು ಭಾಗಗಳಾಗಿದ್ದವು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ನಾನು ಪೋಡಿ ಮಾಡಿಸಿಲ್ಲ ಎಂದು ಹೇಳುತ್ತಾರೆ. ನನಗೆ ಪೋಡಿಯಾಗಿದ್ದು ಗೊತ್ತಾಗಿ 2 ವರ್ಷವಾಗಿದೆ. ಸದರಿ ಪೋಡಿಯನ್ನು ಪ್ರಶ್ನಿಸಿ ನಾನು ಅಪೀಲು ಮಾಡಿಲ್ಲ. ಆದರೆ ಎ ಡಿ ಎಲ್ ಆರ್ ಗೆ ಅರ್ಜಿ ಕೊಟ್ಟಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ನಾನು ಕರಾರು ಮಾಡಿಕೊಂಡ ಸ್ವತ್ತು ಪೋಡಿ ಆದ ನಂತರ ಸ.ನಂ. 28/4 ಆಗಿತ್ತು ಮತ್ತು ಅದರ ವಿಸ್ತೀರ್ಣ 20 ಗುಂಟೆ ಎಂದು ಬಂದಿತ್ತು ಎಂದರೆ ಸಾಕ್ಷಿ ಆಗಿರಬಹುದು ನನಗೆ ಗೊತ್ತಿಲ್ಲದಂತೆ ಮೋಸ ಮಾಡಿ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ.

ಪೋಡಿಯಾದ ನಂತರ ರಮೇಶ್ ಇತನು ನನ್ನ ಬಳಿ ಬಂದು 21 ಗುಂಟೆ ಕ್ರಯಪತ್ರ ಬರೆದುಕೊಡು ಮತ್ತು ಬಾಕಿ ಹಣ ತೆಗೆದುಕೋ ಎಂದು ಹೇಳಿದ್ದನು ಎಂದರೆ ಸರಿಯಲ್ಲ. ನಾನು ಆತ ಕೇಳಿದ್ದಕ್ಕೆ ಇವತ್ತು ಅಥವಾ ನಾಳೆ ಎಂದು ಹೇಳಿ ಮುಂದೆ ಹಾಕುತ್ತಾ ಬಂದಿದ್ದೇನು ಎಂದರೆ ಸರಿಯಲ್ಲ. ವಾದಿಯು ವೆಂಕಟಾಚಲಯ್ಯ ಮತ್ತು ಹನುಮಂತರಾಜು ಇವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದು ಕ್ರಯಪತ್ರ ಬರೆದುಕೊಡು ಎಂದು ಕೇಳಿದ್ದರು ಎಂದರೆ

ಸರಿಯಲ್ಲ. ಆದಾಗ್ಯೂ ನಾನು ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಆದಾದ ನಂತರ ದಿನಾಂಕ ಃ 11.12.2017 ರಂದು ವಾದಿ ನನಗೆ ನೋಟೀಸ್ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಕರಾರುಪತ್ರವನ್ನು ರದ್ದು ಮಾಡಿದ್ದೇನೆ ಕ್ರಯಪತ್ರ ಬರೆದುಕೊಡುವುದಿಲ್ಲವೆಂದು ಉತ್ತರ ಕೊಟ್ಟಿದ್ದೇನು ಎಂದರೆ ಸರಿ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.